2. ಕುಕ್ಕುಂದಿ–ಪೆರ್‌ಡೂರು–ಕಾರ್‌ಜಿ–ಕೊಕ್ಕರಾನಿ ರಸ್ತೆಯ ಬಳಿ ಮಡಿಸಾಲಾ ನದಿಗೆ ಸೇತುವೆ ನಿರ್ಮಾಣ ರೂ. 80.00 ಲಕ್ಷ ನಿರ್ಮಾಣಕ್ಕೆ ಪ್ರಸ್ತಾವನೆಯಿದ್ದು ಇದನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಮುಖಾಂತರ ತೆಗೆದುಕೊಳ್ಳಲು ಉದ್ದೇಶಿಸಿರುವ ಎರಡನೇ ಹಂತದ ಸೇತುವೆ ನಿರ್ಮಾಣ ಯೋಜನೆಯ ಅಡಿಯಲ್ಲಿನ ಕ್ರೋಢೀಕೃತ ಪ್ರಸ್ತಾವನೆಯಲ್ಲಿದೆ. ಪ್ರಸ್ತಾವನೆಯು ಪರಿಶೀಲನೆಯ ಹಂತದಲ್ಲಿದೆ.

ಇ) ಪರಿಶೀಲನೆಯ ಹಂತದಲ್ಲಿದೆ.

.....

120 (279) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ಮಧುವನ ಪ್ರದೇಶದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತನವರು ಸಬ್ ಸ್ಟೇಷನ್ ಪ್ರಾರಂಭಿಸಲು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು).

ಆ) ಎಂದಿನಿಂದ ಸಬ್ ಸ್ಟೇಷನ್ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:

1 ಬ್ರಹ್ಮಾವರ ಸಮೀಪ ಮಧುವನ ಪ್ರದೇಶದಲ್ಲಿ 1 20 ಎಂ.ವಿ.ಎ., 110/11 ಕೆ.ವಿ. ಸಬ್ ಸ್ಟೇಷನ್ ನಿರ್ಮಾಣದ ಯೋಜನೆಗೆ ಆಡಳಿತಾತ್ಮಕ ಅನುಮೋದನೆಯನ್ನು ಈಗಾಗಲೇ ನೀಡಲಾಗಿದೆ.

2. ಸಂಪೂರ್ಣ ಟರ್ನ್ ಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಕರೆಯಲಾಗಿತ್ತು. ಕೇವಲ ಎರಡೇ ಸಂಸ್ಥೆಗಳು ಭಾಗವಹಿಸಿದ್ದವು. ಹಾಗೂ ಅವುಗಳು ಕೋಟ್ ಮಾಡಿದ್ದ ಮೌಲ್ಯವು ಟೆಂಡರ್‌ನಲ್ಲಿದ್ದ ಮೊತ್ತಕ್ಕಿಂತ ಶೇಕಡ 20ರಷ್ಟು ಹೆಚ್ಚಿಗೆ ಇದ್ದುದರಿಂದ ಈ ಟೆಂಡರ್‌ಗಳನ್ನು ಕೈಬಿಡಬೇಕಾಯಿತು.

3. ಈಗ ಈ ಕಾಮಗಾರಿಯ ನಿರ್ವಹಣೆಗೆ ಭಾಗಶಃ ಟರ್ನ್ ಕೀ ಟೆಂಡರ್‌ಗಳನ್ನು ಆಹ್ವಾನಿಸಲು ಕ್ರಮಗಳನ್ನು ಜರುಗಿಸಲಾಗುತ್ತಿದೆ.

ಇ) ಭಾಗಶಃ ಟರ್ನ್ ಕೀ ಟೆಂಡರ್‌ಗಳನ್ನು ಅಂತಿಮಗೊಳಿಸಿದ ನಂತರ, ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗುವುದು. ಹಾಗೂ ಅನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

.....

121 (280): ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ಉಪ್ಪು ನೀರಿಗೆ ಕಿಂಡಿ ಅಣೆಕಟ್ಟುಗಳು ಇಲ್ಲದ ಕಾರಣ ಕೃಷಿ ಭೂಮಿಗೆ ತೊಂದರೆಯಾಗುತ್ತಿರುವ ಎಷ್ಟು ಪ್ರದೇಶಗಳನ್ನು ಗುರುತಿಸಲಾಗಿದೆ;

ಆ) ಗುರುತಿಸಿರುವಲ್ಲಿ, ಎಲ್ಲೆಲ್ಲಿ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಿ ಅನುಕೂಲ ಮಾಡಿಕೊಡಲಾಗಿದೆ.